ಪ್ರಜಾವಾಣಿ ಸೋಮವಾರ 4ನೇ ಮೇ 2009

# ಎಸ್ಸೆಸ್ಸೆಲ್ಸಿ ಪರೀಕ್ಷೆ ಪಾಸಾದ 'ಭಾರತೀಯರು'!

ರವಿ ಎನ್. ಬಳೂಟಗಿ

ಪ್ರಜಾವಾಣಿ ವಾರ್ತೆ

ಮೈಸೂರು: ಈ ಭಾರತೀಯರು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪಾಸಾಗಿದ್ದಾರೆ. ಅರೆ ಇವರೆಂತಹ ಭಾರತೀಯರು ಎಂದು ಹುಬ್ಬೇರಿಸಬೇಡಿ. ಭಾರತೀಯತೆಯೇ ಈ ಮಕ್ಕಳ ಜಾತಿ. ಭಾರತೀಯತೆಯೇ ಇವರ ತಂದೆ-ತಾಯಿ. ಸಮಾಜ ಕೊಟ್ಟಿರುವ ಏಕೈಕ ಭಾರತೀಯತೆ. ಅದೇ ಹೆಸರಿನಿಂದಲೇ ಪ್ರಸಕ್ತ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಈ ಮಕ್ಕಳು ಪಾಸಾಗಿದ್ದಾರೆ.

ಈ ಮಕ್ಕಳ ಶಾಲಾ ಪ್ರಮಾಣಪತ್ರದಲ್ಲಿ ಏನು ಬರೆಯಲಾಗಿದೆ? ಜಾತಿ ಕಾಲಂನಲ್ಲಿ 'ಭಾರತೀಯ' ಎಂದು ನಮೂದಿಸಲಾಗಿದೆ. ಈ ಕಾರಣದಿಂದ ಇವರ ಧರ್ಮ, ಜಾತಿ, ಪೋಷಕರು ಎಲ್ಲವೂ ಭಾರತೀಯವೇ ಆಗಿದೆ.

ಶಾಲೆ ಪ್ರವೇಶಕ್ಕೆ ಜಾತಿ ಪ್ರಮಾಣ ಪತ್ರ ಕಡ್ಡಾಯ. ಸಾಮಾನ್ಯ ಮಕ್ಕಳಾದರೆ ಅವರಿಗೆ ಜಾತಿ ಇರುತ್ತದೆ. ತಂದೆ-ತಾಯಿಗಳೂ ಇರುತ್ತಾರೆ. ಆದರೆ ಅನಾಥರು, ದೌರ್ಜನ್ಯಕ್ಕೊಳಗಾದವರು, ಹೆತ್ತವರಿಂದ ದೂರವಾದವರು, ಲೈಂಗಿಕ ಕಾರ್ಯಕರ್ತೆಯರಿಗೆ ಹುಟ್ಟಿದ ಮಕ್ಕಳಿಗೆಲ್ಲ ಯಾವ ಜಾತಿ?

ಇಂತಹ ಪ್ರಶ್ನೆ ಮೂರು ವರ್ಷದ ಹಿಂದೆ ಮೈಸೂರಿನಲ್ಲಿ ಹುಟ್ಟಿಕೊಂಡಿತ್ತು. ನಿರ್ಗತಿಕ ಮಕ್ಕಳು ಪ್ರವೇಶ ಬಯಸಿ ಶಾಲೆಯೊಂದಕ್ಕೆ ಅರ್ಜಿ ಸಲ್ಲಿಸಿದರು. ಶಾಲಾ ಮುಖ್ಯಸ್ಥರು ಪ್ರವೇಶಕ್ಕೆ ಜಾತಿ ಪ್ರಮಾಣ ಪತ್ರದ ಸಾಖಲೆ ಕಡ್ಡಾಯವೆಂದು



ರಮೇಶ್



ಮೋಹನ ಕುಮಾರಿ



ಮಂಗಳಾ



ರವಿ

ಪ್ರವೇಶ ನಿರಾಕರಿಸಿದರು. ಹೀಗೆ ಪ್ರವೇಶ ನಿರಾಕರಿಸಿದ್ದರಿಂದ ವಿದ್ಯೆ ಕಲಿಯುವ ಹಂಬಲದ ಮಕ್ಕಳಲ್ಲಿ ನಿರಾಸೆ ಮೂಡಿತು.

ಈ ಸುದ್ದಿ ಸರ್ಕಾರದ ಕಿವಿಗೆ ಬಿದ್ದಿತು. ಜಾತಿ ಇಲ್ಲ ಎನ್ನುವ ಕಾರಣಕ್ಕೆ ಪ್ರವೇಶ ನಿರಾಕರಿಸುವ ಹಾಗಿಲ್ಲ ಎಂದು ಆದೇಶ ಹೊರಡಿಸಿತು. ಅದಕ್ಕಾಗಿ ವಿಶೇಷ ಕಾನೂನು ರೂಪಿಸಿ "ಭಾರತೀಯ" ಎಂಬ ಹೆಸರಿನಲ್ಲಿ ಪ್ರವೇಶಕ್ಕೆ ಅವಕಾಶ ಕಲ್ಪಿಸಿತು. ಅದರಂತೆ ಮೈಸೂರಿನ ಒಡನಾಡಿ ಸಂಸ್ಥೆಯ ಪೋಷಣೆಯಲ್ಲಿದ್ದ ಸುಮಾರು ಮಕ್ಕಳಿಗೆ ಜಾತಿ ಕಾಲಂನಲ್ಲಿ 'ಭಾರತೀಯ' ಎಂದು ನಮೂದಿಸಲಾಯಿತು. ಈ ಮಕ್ಕಳು ನೇರವಾಗಿ 8ನೇ ತರಗತಿಗೆ ಪ್ರವೇಶ ಗಿಟ್ಟಿಸಿದರು. ಆ ಮಕ್ಕಳು ಇದೀಗ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದು ಮುಗಿಸಿದ್ದಾರೆ. 8 ಮಕ್ಕಳಲ್ಲಿ ನಾಲ್ವರು ಯಶಸ್ವಿಯಾಗಿದ್ದಾರೆ.

ಮೋಹನ ಕುಮಾರಿ, ರಮೇಶ್, ರವಿ ಹಾಗೂ ಮಂಗಳಾ ಎಂಬ ನಾಲ್ವರು 'ಭಾರತೀಯರು' ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿದ್ದಾರೆ.

ಇವರಲ್ಲಿ ರವಿ ಪ್ರಥಮ ಶ್ರೇಣಿ, ರಮೇಶ್, ಮೋಹನ ಕುಮಾರಿ, ಮಂಗಳಾ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ರವಿ ಕನ್ನಡದಲ್ಲಿ 108 ಹಾಗೂ ಸಮಾಜ ವಿಜ್ಞಾನದಲ್ಲಿ 98 ಅಂಕ ಗಳಿಸಿ ಸಾಧನೆ ಯಾರಿಗೂ ಕಮ್ಮಿ ಇಲ್ಲ ಎನ್ನುತ್ತಾನೆ. ಮೋಹನ ಕುಮಾರಿ 322, ರಮೇಶ್ 260 ಅಂಕಗಳೊಂದಿಗೆ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಶಾರದಾ ಎನ್ನುವ ವಿದ್ಯಾರ್ಥಿ ಉಳಿದ ವಿಷಯಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾದರೂ ಇಂಗ್ಲಿಷ್‌ನಲ್ಲಿ ಮಾತ್ರ ವಿಫಲನಾಗಿ, ನಿರಾಶೆಯಾಗದೆ ಸಪ್ಲಿಮೆಂಟರಿಗೆ ಸಿದ್ಧತೆ ನಡೆಸುತ್ತಿದ್ದಾನೆ. ಮಣಿ, ಕೃಷ್ಣ, ಸ್ವಾಮಿ ಪರೀಕ್ಷೆಗೆ ಹಾಜರಾದ ಇತರೆ ವಿದ್ಯಾರ್ಥಿಗಳು.

ಈ ಸಾಧನೆ ಅವರ ಕನಸಿಗೆ ಕೊನೆಗೊಂಡಿಲ್ಲ. ಇನ್ನು ಉತ್ತಮ ಸಾಧನೆಯ ಹಾದಿ ಮುಂದಿದೆ. ಕನ್ನಡ, ಸಮಾಜ ವಿಜ್ಞಾನದಲ್ಲಿ ಉತ್ತಮ ಅಂಕ ಗಳಿಸಿದ ರವಿಗೆ ಪಿಯುಸಿಯಲ್ಲಿ ಕಲಾ ವಿಷಯ ಆಯ್ದುಕೊಳ್ಳುವ ಬಯಕೆ ಇದೆ. ರಮೇಶ್ ಸಹ ಕಲಾ ವಿಷಯ ಆಯ್ದರೆ, ಮೋಹನ ಕುಮಾರಿಯದ್ದು ಕಾಮರ್ಸ್ ಆಯ್ಕೆ.

'ನಮಗೆ ಜಾತಿ ಇಲ್ಲದಕ್ಕೆ ವಿಷಾದವಿಲ್ಲ. ಭಾರತೀಯರು ಎಂದು ಹೇಳಿಕೊಳ್ಳಲು ಹೆಮ್ಮೆ ಅನ್ನಿಸುತ್ತದೆ' ಎನ್ನುತ್ತಾರೆ.

ಇವರೆಲ್ಲ ಜಾತಿ ಕೇಳಿದರೂ ಮುಜುಗರವಿಲ್ಲದೆ ಭಾರತೀಯ ಎಂದು ಹೇಳಿಕೊಳ್ಳುತ್ತಾರೆ.